ಈ) ಬೀದರ್ ಜಿಲ್ಲೆಯ ವಿದ್ಯುತ್ ಪಂಪ್‌ಸೆಟ್ ಗ್ರಾಹಕರಿಗೆ ಕರ್ನಾಟಕ ಸರ್ಕಾರ ಹಾಗೂ ಕೆಪಿಟಿಸಿಎಲ್ ನೇಮಿಸಿದ ಲೋಡ್ ಶೆಡ್ಡಿಂಗ್ ಅವಧಿಯ ಪ್ರಕಾರ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ. ಆದರೆ, ಕಬ್ಬನ್ನು ಕಾರ್ಖಾನೆಗಳಿಗೆ ಸಾಗಿಸದೇ ಒಣಗಿ ಹೋದಂತಹ ಪರಿಸ್ಥಿತಿ ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಈ) ಪ್ರಶ್ನೆ ಉದ್ಭವಿಸುವುದಿಲ್ಲ.

ಕರಾವಳಿ ಜಿಲ್ಲೆಗಳಲ್ಲಿ ಮೀನುಗಾರಿಕಾ ಜೆಟ್ಟಿ

2121 (2528) ಶ್ರೀ ಸಭಾಪತಿ ಯು.ಆರ್. (ಉಡುಪಿ): ಮಾನ್ಯ ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದ ಕರಾವಳಿ ಜಿಲ್ಲೆಗಳಾದ ದಕ್ಷಿಣ ಕನ್ನಡ, ಉಡುಪಿ ಹಾಗೂ ಉತ್ತರ ಕನ್ನಡ ಜಿಲ್ಲೆಗಳಲ್ಲಿ 2001-02, 2002-03ರಲ್ಲಿ ಮೀನುಗಾರಿಕಾ ಜೆಟ್ಟಿ ಅಭಿವೃದ್ಧಿಗಾಗಿ (ಕೇಂದ್ರ ಪುರಸ್ಕೃತ ಯೋಜನೆಯೂ ಸೇರಿದಂತೆ) ಬಿಡುಗಡೆಗೊಳಿಸಿದ ಹಣವೆಷ್ಟು;

ಆ) ಹೊಸ ಮೀನುಗಾರಿಕಾ ಜೆಟ್ಟಿಗಳ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಇದ್ದಲ್ಲಿ ವಿವರಗಳನ್ನು ತಿಳಿಸುವುದು?

ಶ್ರೀ ವಸಂತ ವಿ. ಸಾಲಿಯಾನ (ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು)

ಅ) ರಾಜ್ಯದ ಕರಾವಳಿ ಜಿಲ್ಲೆಗಳಲ್ಲಿ 2001-02 ಮತ್ತು 2002-03ನೇ ಸಾಲಿನಲ್ಲಿ ಯಾವುದೇ ಮೀನುಗಾರಿಕೆ ಜೆಟ್ಟಿ ನಿರ್ಮಾಣ ಕೈಗೊಂಡಿರುವುದಿಲ್ಲ ಮತ್ತು ಈ ಸಾಲುಗಳಲ್ಲಿ ಮೀನುಗಾರಿಕೆ ಜೆಟ್ಟಿಗಳಿಗೆಂದು ಯಾವ ಹಣವನ್ನು ಬಿಡುಗಡೆ ಮಾಡಿರುವುದಿಲ್ಲ.

ಆ) ಹೌದು. ಉತ್ತರ ಕನ್ನಡ ಜಿಲ್ಲೆಯ ಬೆಳಂಬಾರ, ಗಂಗಾವಳಿಯಲ್ಲಿ, ದಕ್ಷಿಣ ಕನ್ನಡ ಜಿಲ್ಲೆಯ ಉಳ್ಳಾಲದಲ್ಲಿ ಮತ್ತು ಉಡುಪಿ ಜಿಲ್ಲೆಯ ಕೋಡೇರಿಯಲ್ಲಿ "ಆರ್‌ಐಡಿಎಫ್" ಯೋಜನೆಯಡಿಯಲ್ಲಿ ಮೀನುಗಾರಿಕೆ ಜೆಟ್ಟಿಗಳನ್ನು ನಿರ್ಮಿಸುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಉಡುಪಿ ಜಿಲ್ಲೆಯಲ್ಲಿರುವ ಸಣ್ಣ ಕೈಗಾರಿಕೆಗಳು

2122 (2529) ಶ್ರೀ ಸಭಾಪತಿ ಯು.ಆರ್. (ಉಡುಪಿ): ಮಾನ್ಯ ಸಣ್ಣ ಕೈಗಾರಿಕೆ ಮತ್ತು ಹಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಉಡುಪಿ ಜಿಲ್ಲೆಯಲ್ಲಿ ಅಸ್ತಿತ್ವದಲ್ಲಿರುವ ಸಣ್ಣ ಕೈಗಾರಿಕೆಗಳು ಎಷ್ಟು; ಯಾವ ಯಾವ ಕೈಗಾರಿಕಾ ಪ್ರದೇಶಗಳಲ್ಲಿವೆ; (ವಿವರ ತಿಳಿಸುವುದು)

ಆ) ಉಡುಪಿ ಜಿಲ್ಲೆಯಲ್ಲಿ ಅಸ್ತಿತ್ವದಲ್ಲಿರುವ ಕೈಗಾರಿಕಾ ಷೆಡ್‌ಗಳು ಎಷ್ಟು; ಎಷ್ಟು ಖಾಲಿ ಇವೆ; ಬಾಡಿಗೆ ಬಾಕಿಗಾಗಿ ಅಥವಾ ಇತರೇ ಕಾರಣಕ್ಕಾಗಿ ಮುಚ್ಚಿರುವ ಕೈಗಾರಿಕೆಗಳು ಎಷ್ಟು?

ಶ್ರೀ ಆರ್. ರೋಷನ್‌ಬೇಗ್ (ಸಣ್ಣ ಕೈಗಾರಿಕೆ ಮತ್ತು ಹಜ್ ಸಚಿವರು)

ಅ) 6226 ಸಣ್ಣ ಕೈಗಾರಿಕೆಗಳಿರುತ್ತವೆ, ಉಡುಪಿ ಜಿಲ್ಲೆಯಲ್ಲಿ ಶಿವಳ್ಳಿ ಕೈಗಾರಿಕಾ ಪ್ರದೇಶ ಮಾತ್ರ ಇದ್ದು, ಶಿವಳ್ಳಿ ಕೈಗಾರಿಕಾ ಪ್ರದೇಶದಲ್ಲಿ 63 ಸಣ್ಣ ಪ್ರಮಾಣ ಕೈಗಾರಿಕಾ ಘಟಕಗಳಿರುತ್ತವೆ. ಉಳಿದವು ಜಿಲ್ಲೆಯಾದ್ಯಂತ ಹರಡಿರುತ್ತವೆ.

ಆ) ಉಡುಪಿ ಜಿಲ್ಲೆಯಲ್ಲಿ ಮಣಿಪಾಲ, ಕಾರ್ಕಳ ಮತ್ತು ಕೋಟೇಶ್ವರದಲ್ಲಿ 3 ಕೈಗಾರಿಕಾ ವಸಾಹತುಗಳಿವೆ. ಇವುಗಳಲ್ಲಿ 78 ಕೈಗಾರಿಕಾ ಶೆಡ್ಡುಗಳು ಅಸ್ತಿತ್ವದಲ್ಲಿವೆ. ಇವುಗಳಲ್ಲಿ 11